# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1130 |
| ಸದಸ್ಯರ ಹೆಸರು | : | ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 17.03.2025 |
| ಉತ್ತರಿಸಬೇಕಾದ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಕೇಂದ್ರ ಮುದ್ರಣಾಲಯಕ್ಕೆ ಸಂಬಂಧಿಸಿದಂತೆ, 2023-24 ಮತ್ತು 2024-25 ನೇ ಸಾಲುಗಳಲ್ಲಿ ಪ್ರತಿ ಕಿ.ಲೋ. ಪೇಪರ್ (Maplitho Printing Paper (Reels & Sheets)) ಅನ್ನು ಎಷ್ಟು ದರದಲ್ಲಿ ಖರೀದಿಸಲಾಗಿದೆ? | ಸರ್ಕಾರಿ ಕೇಂದ್ರ ಮುದ್ರಣಾಲಯಕ್ಕೆ 2023-24 ಮತ್ತು 2024-25 ನೇ ಸಾಲಿನಲ್ಲಿ ಪೇಪರ್ ಖರೀದಿಸಿರುವ ವಿವರಗಳನ್ನು ಅನುಬಂಧ-1 ರಲ್ಲಿರಿಸಿದೆ. |
| ಆ) | ಖರೀದಿಸಲಾದ ಪೇಪರ್‌ನ ಒಟ್ಟು ಪ್ರಮಾಣ ಮತ್ತು ಮೊತ್ತ ಎಷ್ಟು? (ವರ್ಷವಾರು ಮಾಹಿತಿ ನೀಡುವುದು) | ಖರೀದಿಸಲಾದ ಪೇಪರ್ ಪ್ರಮಾಣ ಮತ್ತು ಮೊತ್ತದ ವರ್ಷವಾರು ವಿವರಗಳನ್ನು ಅನುಬಂಧ-2 ರಲ್ಲಿರಿಸಿದೆ. |
| ಇ) | ಸದರಿ ಸಾಲುಗಳಲ್ಲಿ ಖರೀದಿಸಲಾದ ಪೇಪರ್‌ನ ಪ್ರತಿ ಕಿ.ಲೋ ದರದಲ್ಲಿ 20 ರೂಪಾಯಿಗೂ ಹೆಚ್ಚು ವ್ಯತ್ಯಾಸ (2024-25 ನೇ ಸಾಲಿಗಿಂತ 2023-24 ರಲ್ಲೇ ದರ ಹೆಚ್ಚು) ಕಂಡು ಬಂದಿರುವುದಕ್ಕೆ ಕಾರಣಗಳೇನು: ಈ ಬಗ್ಗೆ ಕೈಗೊಂಡ ಕ್ರಮಗಳೇನು: | ಮುದ್ರಣ ಇಲಾಖೆಯಲ್ಲಿ ಉನ್ನತ ಮಟ್ಟದ ತಾಂತ್ರಿಕ ಹಾಗೂ ಇತರೆ ಅಧಿಕಾರಿಗಳನ್ನು ಒಳಗೊಂಡ ಸಮಿತಿಯು ಮಾರುಕಟ್ಟೆಯಲ್ಲಿನ ವಿವಿಧ ಬ್ರ್ಯಾಂಡ್ ಮತ್ತು ಗುಣಮಟ್ಟದ ಮ್ಯಾಪ್ಲಿಥೋ ಕಾಗದಗಳ ವರ್ತಮಾನವನ್ನು ಅವಲೋಕಿಸಿ ಕಾಗದಗಳಿಗೆ ಅಂದಾಜು ದರಗಳನ್ನು ನಿಗದಿಪಡಿಸುತ್ತದೆ.<br><br>ಪ್ರತೀ ಸಾಲಿನಲ್ಲೂ ಕಾಗದ ದರಗಳು ಮಾರುಕಟ್ಟೆಯಲ್ಲಿನ ಹಲವಾರು ಕಾರಣಗಳಿಂದ ಸ್ಥಿರತೆಯನ್ನು ಕಾಯ್ದುಕೊಳ್ಳದೇ, ಬಹುತೇಕ ಏರಿಳಿತವಾಗುತ್ತವೆ. ಆದ್ದರಿಂದ ಪ್ರತೀ ಟೆಂಡರ್ ಪೂರ್ವದಲ್ಲಿ ಕಾಗದ ದರಗಳ ಕುರಿತು ಮಾರುಕಟ್ಟೆಯಲ್ಲಿನ ವಿಶ್ಲೇಷಣೆಯನ್ನು ಅವಲೋಕಿಸಿ ಪ್ರತಿ ಕೆ.ಜಿ. ಅಥವಾ ಪ್ರತಿ ಮೆಟ್ರಿಕ್ ಟನ್‌ಗೆ ಅಂದಾಜು ದರಗಳನ್ನು ಸಮಿತಿಯು ನಿಗದಿಪಡಿಸುತ್ತದೆ. |

| | | |
|---|---|---|
| | | ಈ ರೀತಿ ನಿಗದಿಪಡಿಸಿದ ಅಂದಾಜು ಮೊತ್ತದ ಅನುಸಾರ ಕರ್ನಾಟಕ ಸರ್ಕಾರದ ಇ- ಸಂಗ್ರಹಣಾ ವೇದಿಕೆಯ ಮುಖೇನ ಮುಕ್ತ ಟೆಂಡರ್‌ಗಳನ್ನು ಆಹ್ವಾನಿಸಲಾಗುತ್ತದೆ. ಟೆಂಡರ್‌ನಲ್ಲಿ ಬರುವ ಸ್ಪರ್ಧಾತ್ಮಕ ದರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಕಾಯಿದೆ 9 ಹಾಗೂ 10 ರಡಿ ಇಲಾಖಾ ಹಂತದಲ್ಲಿ ರಚಿತವಾದ ಉನ್ನತ ಅಧಿಕಾರಿಗಳ ಸಮಿತಿಯ ಮುಖಾಂತರ ತಾಂತ್ರಿಕ ಮೌಲ್ಯಮಾಪನ ಹಾಗೂ ಆರ್ಥಿಕ ಮೌಲ್ಯಮಾಪನ ಪ್ರಕ್ರಿಯೆ ನಡೆಯುತ್ತದೆ. ಹೀಗೆ ಬರುವ ಸ್ಪರ್ಧಾತ್ಮಕ ದರಗಳು ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 128 ವೆಚ್ಚ – 12/2021, ದಿನಾಂಕ:10.05.2022 ರಲ್ಲಿನ ನಿರ್ದೇಶನದಂತೆ ಟೆಂಡರ್‌ಗೆ ನಿಗದಿಪಡಿಸಿದ ಅಂದಾಜು ದರಗಳ ವ್ಯಾಪ್ತಿಯ ಒಳಗೆ ಬರುವ ಕನಿಷ್ಠ (ಎಲ್-1) ಸ್ಪರ್ಧಾತ್ಮಕ ದರಗಳನ್ನು ಮಾತ್ರ ಸಮಿತಿಯು ಅನುಮೋದಿಸುತ್ತದೆ.<br><br>ಆದುದರಿಂದ ಯಾವುದೇ ದರಗಳು ಅಂದಾಜು ದರಕ್ಕಿಂತ ಹೆಚ್ಚಿರುವುದಿಲ್ಲ. ಮಾರುಕಟ್ಟೆಯಲ್ಲಿ ಕಾಗದದ ಬೆಲೆಯಲ್ಲಿ ವರ್ಷದಿಂದ ವರ್ಷಕ್ಕೆ ಏರಿಳಿತವಾಗುವುದರಿಂದ ಖರೀದಿ ದರದಲ್ಲಿ ವ್ಯತ್ಯಾಸವಾಗುತ್ತದೆ. |
| ಈ) | ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟವನ್ನುಂಟು ಮಾಡಿರುವವರ ವಿರುದ್ಧ ದೂರು ಸ್ವೀಕೃತವಾಗಿದೆಯೇ/ದಾಖಲಾಗಿದೆಯೇ: ಇದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ಸಂಪೂರ್ಣ ಮಾಹಿತಿ ನೀಡುವುದು) | ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. |

| | | |
|---|---|---|
| ಉ) | ದೊಡ್ಡ ಪ್ರಮಾಣದಲ್ಲಿ ಆಗಿರುವ ಆರ್ಥಿಕ ನಷ್ಟವನ್ನು ಸರ್ಕಾರ ಯಾವ ರೀತಿ ವಸೂಲಿ ಮಾಡಲಾಗುವುದು ಹಾಗೂ ಆರೋಪಿತರ ವಿರುದ್ಧ ಕೈಗೊಳ್ಳಬಹುದಾದ ಶಿಸ್ತು & ದಂಡನೆಯ ಕ್ರಮಗಳೇನು? (ಮಾಹಿತಿ ನೀಡುವುದು) | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಮತ್ತು ನಿಯಮಗಳ ಅಡಿಯಲ್ಲಿ ಸಂಗ್ರಹಣೆಯಾಗಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ. ಆದಾಗ್ಯೂ ಈ ಕುರಿತು ದೂರು ಸ್ವೀಕೃತವಾದಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು. |

***ಸಂಖ್ಯೆ:ಇಪಿ 18 ಇಎಸ್‌ಡಬ್ಲ್ಯೂ 2025***

**(ಎಸ್.ಮಧುಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು

# ಅನುಬಂಧ-1

| 2023-24ನೇ ಸಾಲಿನ ಆರ್ಥಿಕ ವರ್ಷದ ಮಾಹಿತಿ | | | | | |
|---|---|---|---|---|---|
| ಕ್ರಮ ಸಂಖ್ಯೆ | ಕಾಗದದ ವಿವರಣೆ | 2023-24 ನೇ ಸಾಲಿನಲ್ಲಿ ಟೆಂಡರ್ ಪೂರ್ವ ಸಮಿತಿಯು ನಿಗಧಿ ಪಡಿಸಿದ ಅಂದಾಜು ದರಗಳು | | ಟೆಂಡರ್ ಪರಿಶೀಲನಾ ಮತ್ತು ಮೌಲ್ಯಮಾಪನ ಖರೀದಿ ಸಮಿತಿಯು ಅನುಮೋದಿಸಿದ ಟೆಂಡರ್ ಸ್ಪರ್ಧಾತ್ಮಕ ಕನಿಷ್ಟ ದರಗಳು | |
| | | ಪ್ರತಿ ಮೆಟ್ರಿಕ್ ಟನ್‌ಗಳಲ್ಲಿ (₹.) | ಪ್ರತಿ ಕೆ.ಜಿ. ಗಳಲ್ಲಿ (₹.) | ಸ್ಪರ್ಧಾತ್ಮಕದರ (ಎಲ್-1) ಎಂ.ಟಿ ಗಳಲ್ಲಿ (₹.) | ಸ್ಪರ್ಧಾತ್ಮಕದರ (ಎಲ್-1) ಕೆ.ಜಿ. ಗಳಲ್ಲಿ (₹.) |
| 1 | Maplitho Printing Paper(Reels & sheet) | 106200.00 | 106.20 | 102816.00 | 102.82 |

| 2024-25ನೇ ಸಾಲಿನ ಆರ್ಥಿಕ ವರ್ಷದ ಮಾಹಿತಿ | | | | | |
|---|---|---|---|---|---|
| ಕ್ರಮ ಸಂಖ್ಯೆ | ಕಾಗದದ ವಿವರಣೆ | 2024-25 ನೇ ಸಾಲಿನಲ್ಲಿ ಟೆಂಡರ್ ಪೂರ್ವ ಸಮಿತಿಯು ನಿಗಧಿ ಪಡಿಸಿದ ಅಂದಾಜು ದರಗಳು | | ಟೆಂಡರ್ ಪರಿಶೀಲನಾ ಮತ್ತು ಮೌಲ್ಯಮಾಪನ ಖರೀದಿ ಸಮಿತಿಯು ಅನುಮೋದಿಸಿದ ಟೆಂಡರ್ ಸ್ಪರ್ಧಾತ್ಮಕ ಕನಿಷ್ಟ ದರಗಳು | |
| | | ಪ್ರತಿ ಎಂ.ಟಿ ಗೆ (₹.) | ಪ್ರತಿ ಕೆ.ಜಿ ಗೆ (₹.) | ಸ್ಪರ್ಧಾತ್ಮಕದರ (ಎಲ್-1) ಎಂ.ಟಿಗಳಲ್ಲಿ (₹. ಗಳಲ್ಲಿ) | ಸ್ಪರ್ಧಾತ್ಮಕದರ (ಎಲ್-1) ಕೆ.ಜಿಗಳಲ್ಲಿ (₹. ಗಳಲ್ಲಿ) |
| 1 | Maplitho Printing Paper(Reels & sheet) | 97000.00 | 97.00 | 78085.28 | 78.09 |

# ಅನುಬಂಧ-2

| 2023-24ನೇ ಸಾಲಿನ ಆರ್ಥಿಕ ವರ್ಷದ ಮಾಹಿತಿ | | | | |
|---|---|---|---|---|
| ಕ್ರಮ ಸಂಖ್ಯೆ | ಕಾಗದದ ವಿವರಣೆ | ಖರೀದಿಸಿದ ಒಟ್ಟಾರೆ ಪ್ರಮಾಣ ( ಮೆಟ್ರಿಕ್ ಟನ್‌ಗಳಲ್ಲಿ ) | ಸ್ಪರ್ಧಾತ್ಮಕ ದರ (ಎಲ್-1) ಎಂ.ಟಿ ಗಳಲ್ಲಿ (ರೂ. ಗಳಲ್ಲಿ) | ಒಟ್ಟು ಖರೀದಿ ಮೊತ್ತ (ರೂ. ಗಳಲ್ಲಿ) |
| 1 | Maplitho Printing Paper(Reels & sheet) | 460.00 | 102816.00 | 47295360.00 |
| | | | | |

| 2024-25ನೇ ಸಾಲಿನ ಆರ್ಥಿಕ ವರ್ಷದ ಮಾಹಿತಿ | | | | |
|---|---|---|---|---|
| ಕ್ರಮ ಸಂಖ್ಯೆ | ಕಾಗದದ ವಿವರಣೆ | ಖರೀದಿಸಿದ ಒಟ್ಟಾರೆ ಪ್ರಮಾಣ ಮೆಟ್ರಿಕ್ ಟನ್‌ಗಳಲ್ಲಿ | ಸ್ಪರ್ಧಾತ್ಮಕ ದರ (ಎಲ್-1) ಎಂ.ಟಿ ಗಳಲ್ಲಿ (ರೂ. ಗಳಲ್ಲಿ) | ಒಟ್ಟು ಖರೀದಿ ಮೊತ್ತ (ರೂ. ಗಳಲ್ಲಿ) |
| 1 | Maplitho Printing Paper(Reels & sheet) | 227.00 | 78085.28 | 17725358.56 |